# PGS-India ಕಾರ್ಯ ಕೈಪಿಡಿ (PGS-India Operating manual)

ಅಧ್ಯಾಯ 4

## ಅರ್ಹತಾ ಮಾನದಂಡಗಳು ಮತ್ತು ಸ್ಥಳೀಯ ಗುಂಪುಗಳಿಗೆ (LG), ವ್ಯಕ್ತಿಗತ ಉತ್ಪಾದಕರು ಮತ್ತು ಸಂಸ್ಕರಣೆದಾರರು/ನಿರ್ವಾಹಕರಿಗೆ ಕ್ರಿಯಾತ್ಮಕ ಅವಶ್ಯಕತೆಗಳು

### 4.1 ಸ್ಥಳೀಯ ಗುಂಪುಗಳಿಗೆ ಅಗತ್ಯತೆ ಮತ್ತು ಅರ್ಹತಾ ಮಾನದಂಡಗಳು

a) ಒಂದೇ ಗ್ರಾಮಕ್ಕೆ ಸೇರಿದ ಅಥವಾ ಆ ಗ್ರಾಮಕ್ಕೆ ಮತ್ತು ಪ್ರಾಂತ್ಯಕ್ಕೆ ಹೊಂದಿಕೊಂಡಿರುವಂತಹ ಗ್ರಾಮಗಳಲ್ಲಿ ಕನಿಷ್ಠ 5 ಸದಸ್ಯರನ್ನು ಒಳಗೊಂಡಿರುವ ಒಂದು ಸ್ಥಳೀಯ ಗುಂಪನ್ನು ರಚಿಸಬೇಕು. ಪ್ರಾದೇಶಿಕ ಪರಿಷತ್ತುಗಳು ಸ್ಥಳೀಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಗುಂಪಿಗೆ ಗರಿಷ್ಠ ಸಂಖ್ಯೆಯ ರೈತರನ್ನು ನಿರ್ಧರಿಸಬೇಕಾಗುತ್ತದೆ.

b) ರೈತ ಮಹಿಳೆಯರ ಸಮರ್ಪಕ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಬೇಕು.

c) ಗುಂಪಿನ ಕನಿಷ್ಠ ಸಂಖ್ಯೆಯ (25%) ಸದಸ್ಯರು PGS ಸಾವಯವ ಖಾತ್ರಿ ವ್ಯವಸ್ಥೆಗಳು ಅಥವಾ ಪ್ರಮಾಣೀಕರಣ ವ್ಯವಸ್ಥೆ ಮತ್ತು ಸಾವಯವ ಉತ್ಪಾದನೆಯ ರಾಷ್ಟ್ರೀಯ ಮಾನದಂಡಗಳ (NPOP) ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಬೇಕು ಅಥವಾ ಪ್ರಾದೇಶಿಕ ಪರಿಷತ್ತುಗಳು, ವಲಯ ಪರಿಷತ್ತುಗಳು ಅಥವಾ PGS ಸೆಕ್ರೆಟರಿಯೇಟ್ ರವರು ಆಯೋಜಿಸಿದ PGS ಗ್ಯಾರಂಟಿ ಸಿಸ್ಟಮ್‌ನಲ್ಲಿ ತರಬೇತಿ ಪಡೆದಿರಬೇಕು ಅಥವಾ PGS ಗುಂಪಿನ ಇತರ ಪ್ರಮುಖ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿರಬೇಕು.

d) [illegible] ಭಾಗವಹಿಸುವ ವಿಧಾನ ಮತ್ತು ಸಾಮೂಹಿಕ ಜವಾಬ್ದಾರಿಗೆ ಬದ್ಧವಾಗಿರಲು ಗುಂಪಿನಲ್ಲಿರುವ ಎಲ್ಲಾ ಸದಸ್ಯರು PGS ಪ್ರತಿಜ್ಞೆ ಮಾಡಿರಬೇಕು ಮತ್ತು ಗುಂಪಿನ ಒಪ್ಪಂದಕ್ಕೆ ಸಹಿ ಹಾಕಿರಬೇಕು.

e) ಆದಾಗ್ಯೂ, ಯಾವುದೇ ವ್ಯಕ್ತಿಗತ ರೈತರ ಜಮೀನಿನ ಗಾತ್ರದ ಮೇಲೆ ಯಾವುದೇ ನಿರ್ಬಂಧವಿಲ್ಲ. ಆದರೆ ಯಾವುದೇ ಸಂದರ್ಭದಲ್ಲಿ, ಒಬ್ಬ ಸದಸ್ಯನ ಜಮೀನು ಗುಂಪಿನ ಅಡಿಯಲ್ಲಿ ಒಳಗೊಂಡಿರುವ ಒಟ್ಟು ಜಮೀನಿನ 50% ಅನ್ನು ಮೀರಬಾರದು.

f) PGS ಸಾವಯವ ಖಾತ್ರಿ ವ್ಯವಸ್ಥೆಯ (PGS-India Guarantee) ಅಡಿಯಲ್ಲಿ ಸಾಮಾನ್ಯವಾಗಿ ಸಮಾನಾಂತರ ಉತ್ಪಾದನೆ ಮತ್ತು ಭಾಗಶಃ ಪರಿವರ್ತನೆಯನ್ನು ಅನುಮತಿಸಲಾಗುವುದಿಲ್ಲ, ಆದ್ದರಿಂದ PGS ಮಾನದಂಡಗಳ ಪ್ರಕಾರ ಎಲ್ಲಾ ಗುಂಪಿನ ಸದಸ್ಯರು ತಮ್ಮ ಜಾನುವಾರುಗಳ ಸಹಿತ ಸಂಪೂರ್ಣ ಜಮೀನನ್ನು ಸಾವಯವ ನಿರ್ವಹಣೆಗೆ ತರುವುದು ಅವಶ್ಯಕ. ಆದಾಗ್ಯೂ, ಕೆಲವು ಸಂದರ್ಭಗಳಲ್ಲಿ ಪ್ರಾದೇಶಿಕ ಪರಿಷತ್ತುಗಳು ವಿನಾಯಿತಿ ನೀಡಬಹುದು ಮತ್ತು ಹಂತ ಹಂತವಾಗಿ ಜಮೀನನ್ನು ಪರಿವರ್ತನೆ ಮಾಡಲು ಅವಕಾಶ ನೀಡಬಹುದು.

g) PGS ದಾಖಲೆಗಳನ್ನು ವೀಕ್ಷಿಸಲು ಮತ್ತು ಕಂಪ್ಯೂಟರ್ ವ್ಯವಸ್ಥೆಗೆ ಹಾಗೂ ಅಂತರ್ಜಾಲ ಬಳಸಲು ಅವಕಾಶ ಕಲ್ಪಿಸಿಕೊಡಬೇಕು (ಐಚ್ಛಿಕ).

h) ಸಂಬಂಧಿತ ಪ್ರಾದೇಶಿಕ ಪರಿಷತ್ತುಗಳಲ್ಲಿ ತಮ್ಮ ಗುಂಪನ್ನು ನೋಂದಾಯಿಸರಬೇಕು ಮತ್ತು PGS ವೆಬ್‌ಸೈಟ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಅಗತ್ಯವಾದ ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಪಡೆದುಕೊಂಡಿರಬೇಕು.

i) ಒಂದು ವೇಳೆ ರೈತ ಸಮೂಹವು ಆನ್‌ಲೈನ್‌ನಲ್ಲಿ ದತ್ತಾಂಶವನ್ನು ಅಪ್‌ಲೋಡ್ ಮಾಡುವ ವ್ಯವಸ್ಥೆಯನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ, ಸೇವೆಗಳನ್ನು ಪ್ರಾದೇಶಿಕ ಪರಿಷತ್ತು ಅಥವಾ ಯಾವುದೇ ಇತರ ಅನುಕೂಲಕರ ಸಂಸ್ಥೆ ಅಥವಾ ಸ್ಥಳೀಯ ಎನ್.ಜಿ.ಒ. ಅಥವಾ ಸೇವಾ ಪೂರೈಕೆದಾರರು ಇತ್ಯಾದಿಗಳಿಂದ ಪಡೆಯಬಹುದು.

j) ಒಬ್ಬ ವ್ಯಕ್ತಿಗತ ರೈತರು ಅಥವಾ 5 ಕ್ಕಿಂತ ಕಡಿಮೆ ಸದಸ್ಯರನ್ನು ಹೊಂದಿರುವ ರೈತರ ಗುಂಪು ಈಗಾಗಲೇ ಅಸ್ತಿತ್ವದಲ್ಲಿರುವ LG ಗೆ ಸೇರಲು ಪ್ರಸ್ತಾಪವನ್ನಿಟ್ಟಿದ್ದರೆ ಅಂತಹ ರೈತರನ್ನು ಪ್ರಾದೇಶಿಕ ಪರಿಷತ್ತಿನ ಸಲಹೆಯ ಮೇರೆಗೆ LG ಸದಸ್ಯರನ್ನಾಗಿ ಸ್ವೀಕರಿಸಬಹುದು.

k) PGS-India ದಲ್ಲಿ ನವೀಕರಣದ ಯಾವುದೇ ಪರಿಕಲ್ಪನೆಯಿಲ್ಲದಿರುವುದರಿಂದ, LG ಯು ಪ್ರಮಾಣೀಕರಣ ಚಟುವಟಿಕೆಗಳನ್ನು ಮಾಡುವವರೆಗೆ, ಪೀರ್ ಮೌಲ್ಯಮಾಪನದ ಸಾರಾಂಶಗಳನ್ನು ಋತುವಿನ ಆಧಾರದ ಮೇಲೆ ಅಪ್‌ಲೋಡ್ ಮಾಡುವವರೆಗೆ ಒಮ್ಮೆ ಮಾತ್ರ ನೋಂದಾಯಿಸಿಕೊಳ್ಳಬೇಕು. ಎರಡು ಋತುಗಳು ಅಥವಾ 12 ತಿಂಗಳುಗಳವರೆಗೆ ಪೀರ್ ಅಪ್ರೈಸಲ್ ಸಾರಾಂಶಗಳನ್ನು ನಿರಂತರವಾಗಿ ಸಲ್ಲಿಸದಿರುವುದು ಗುಂಪಿನ ಅಮಾನತಿಗೆ ಕಾರಣವಾಗುತ್ತದೆ. ಅಂತಹ ಗುಂಪುಗಳ ಪ್ರಮಾಣೀಕರಣ ಪ್ರಕ್ರಿಯೆಯು ಮತ್ತೆ ಹೊಸದಾಗಿ ಪೀರ್ ಅಪ್ರೈಸಲ್ಗಳನ್ನು ಸಲ್ಲಿಸಿದ ದಿನಾಂಕದಿಂದ ಪುನರಾರಂಭಗೊಳ್ಳುತ್ತದೆ ಮತ್ತು ಪ್ರಮಾಣೀಕರಣ ಪ್ರಕ್ರಿಯೆಯು PGS-ಗ್ರೀನ್-1 ಸ್ಥಿತಿಯೊಂದಿಗೆ ಪ್ರಾರಂಭವಾಗುತ್ತದೆ.

## 4.2 ಸ್ಥಳೀಯ ಗುಂಪಿನ ಪಾತ್ರ ಮತ್ತು ಜವಾಬ್ದಾರಿ

a) ಗುಂಪಿನಲ್ಲಿ ರೈತರನ್ನು ಸಂಘಟಿಸಬೇಕು ಮತ್ತು ಪ್ರತಿಯೊಬ್ಬ ಸದಸ್ಯರು ಪ್ರತ್ಯೇಕವಾಗಿ PGS ಸಾವಯವ ಪ್ರತಿಜ್ಞೆಯನ್ನು ಮಾಡಬೇಕು ಮತ್ತು ಗುಂಪು ಒಪ್ಪಂದಕ್ಕೆ ಸಹಿ ಮಾಡಬೇಕು.

b) ಸ್ಥಳೀಯ ಭಾಷೆಯಲ್ಲಿ ಎಲ್ಲಾ ಸದಸ್ಯರಿಗೆ PGS ಮಾನದಂಡಗಳು, ಕಾರ್ಯಾಚರಣೆಯ ಕೈಪಿಡಿ ಮತ್ತು ಮೌಲ್ಯಮಾಪನ ನಮೂನೆಗಳ ಪ್ರತಿಗಳನ್ನು ಒದಗಿಸಬೇಕು. ಒಂದು ವೇಳೆ, ರೈತರು ಅನಕ್ಷರಸ್ಥರಾಗಿದ್ದರೆ, ಅವರಿಗೆ ವಿವರಗಳು ಮತ್ತು ಮಾನದಂಡಗಳನ್ನು ಮೌಖಿಕವಾಗಿ ಮತ್ತು ಚಿತ್ರಾತ್ಮಕ ನಿರೂಪಣೆಗಳ ಮೂಲಕ ವಿವರಿಸಬೇಕು.

c) ಕೃಷಿ ಭೂಮಿಯ ಬಗ್ಗೆ ಅಗತ್ಯ ದಾಖಲೆಗಳ ಜೊತೆಗೆ ಕೃಷಿ ಭೂಮಿಯ ಇತಿಹಾಸವನ್ನು ತಿಳಿಸುವ ದಾಖಲಾತಿ, ಅರ್ಜಿ ನಮೂನೆ, ಸಹಿ ಮಾಡಿದ ಪ್ರತಿಜ್ಞೆ, ಸಹಿ ಮಾಡಿದ ಒಪ್ಪಂದ, ಪ್ರತಿ ಸದಸ್ಯರಿಗೆ ಸಂಬಂಧಿಸಿದಂತೆ ಜಿಪಿಎಸ್ ನಿರ್ದೇಶಾಂಕಗಳೊಂದಿಗೆ ಸ್ಥಳಗಳನ್ನು ತೋರಿಸುವ ಕ್ಷೇತ್ರ ನಕ್ಷೆಗಳು ಮತ್ತು ಪರಿಕರಗಳ ಬಳಕೆ ಮತ್ತು ನಿರ್ವಹಣಾ ಕ್ರಮಗಳ ಕುರಿತು ಕಳೆದ ಒಂದು ವರ್ಷದ ಇತಿಹಾಸವನ್ನು ತಿಳಿಸುವ ದಾಖಲಾತಿಗಳನ್ನು ಒಳಗೊಂಡಿರುವ ಕಡತವನ್ನು ಗುಂಪು ನಿರ್ವಹಿಸಬೇಕು.

d) ಗುಂಪಿನ ಮುಖ್ಯಸ್ಥ ಮತ್ತು ಪೀರ್ ವಿಮರ್ಶಕರ ಪ್ರಮುಖ ತಂಡವನ್ನು ಆಯ್ಕೆ ಮಾಡಬೇಕು (5 ಸದಸ್ಯರ ಗುಂಪಿನಲ್ಲಿ ಕನಿಷ್ಠ 3). ಅಂತಹ ಸದಸ್ಯರ ಸಂಖ್ಯೆಗೆ ಯಾವುದೇ ಮಿತಿ ಇರುವುದಿಲ್ಲ. ಗುಂಪಿನ ಎಲ್ಲಾ ಸದಸ್ಯರು ಪೀರ್ ವಿಮರ್ಶೆಗಳಲ್ಲಿ ಭಾಗವಹಿಸುವುದಾದರೆ ಅದು ಅತ್ಯುತ್ತಮವಾದ ಸ್ಥಿತಿಯಾಗಿರುತ್ತದೆ. ಏಕೆಂದರೆ ಇದು ರೈತರ ನಡುವೆ ಸಾಮರ್ಥ್ಯ ನಿರ್ಮಾಣ ಮತ್ತು ಮಾಹಿತಿ ವಿನಿಮಯಕ್ಕೆ ಅನುವು ಮಾಡಿಕೊಡುತ್ತದೆ ಮತ್ತು ಸಂಘರ್ಷಗಳನ್ನು ಕಡಿಮೆ ಮಾಡುತ್ತದೆ.

e) PGS ಗುಂಪಿನ ಕಾರ್ಯಚಟುವಟಿಕೆಯನ್ನು ಅರ್ಥಮಾಡಿಕೊಳ್ಳಲು ಯಾವುದೇ ಇತರೆ ನೋಂದಾಯಿತ PGS ಗುಂಪಿನ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

f) ಎಲ್ಲಾ ಗುಂಪಿನ ಸದಸ್ಯರ ಜಮೀನುಗಳಲ್ಲಿ ಪ್ರಮಾಣಿತ ಅವಶ್ಯಕತೆಗಳನ್ನು ಅಳವಡಿಸಿ ಇತರ ನೋಂದಾಯಿತ ಗುಂಪಿನಿಂದ ದೃಢೀಕರಣದ ಅನುಮೋದನೆಯನ್ನು ಪಡೆದುಕೊಳ್ಳಬೇಕು. ನೋಂದಣಿ ಸಮಯದಲ್ಲಿ ಒಮ್ಮೆ ಮಾತ್ರ ಈ ದೃಢೀಕರಣದ ಅನುಮೋದನೆಯ ಅಗತ್ಯವಿರುತ್ತದೆ.

g) PGS-India ವೆಬ್‌ಸೈಟ್‌ನಲ್ಲಿ ಗುಂಪನ್ನು ನೋಂದಾಯಿಸಬೇಕು ಮತ್ತು ಪ್ರಾದೇಶಿಕ ಪರಿಷತ್ತಿನಿಂದ ದೃಢೀಕರಣದ ಅನುಮೋದನೆಯನ್ನು ಪಡೆದುಕೊಳ್ಳಬೇಕು.

h) ದೃಢೀಕರಣದ ಅನುಮೋದನೆಗಾಗಿ ಹತ್ತಿರದ PGS ಗುಂಪನ್ನು ಸಂಪರ್ಕಿಸಬೇಕು.

i) ದೃಢೀಕರಣದ ಅನುಮೋದನೆಗಾಗಿ ಯಾವುದೇ PGS ನೋಂದಾಯಿತ ಗುಂಪು ಸಮೀಪದಲ್ಲಿ ಇಲ್ಲದಿದ್ದರೆ, ರಾಜ್ಯದ ಸಂಸ್ಥೆಗಳಿಗೆ (ರಾಜ್ಯ ಕೃಷಿ ಇಲಾಖೆಯ ಜಿಲ್ಲಾಧಿಕಾರಿ) ಅಗತ್ಯತೆಯನ್ನು

ಪರಿಶೀಲಿಸಲು ಮತ್ತು ಪ್ರಾದೇಶಿಕ ಪರಿಷತ್ತಿಗೆ ಅಗತ್ಯ ಪರಿಶೀಲನಾ ವರದಿಯನ್ನು ಸಲ್ಲಿಸಲು ವಿನಂತಿಸಬಹುದು. ಇಲ್ಲದಿದ್ದರೆ ಪರಿಶೀಲನೆ ಮಾಡಲು ಮತ್ತು ನೋಂದಣಿ ಅನುಮೋದನೆಯನ್ನು ನೀಡಲು ಪ್ರಾದೇಶಿಕ ಪರಿಷತ್ತಿಗೆ ವಿನಂತಿಸಬಹುದು. ಸ್ಥಳೀಯ ಗುಂಪುಗಳ ಪರಿಶೀಲನೆ ಮತ್ತು ಅನುಮೋದನೆಗಳಿಗಾಗಿ ಪ್ರಾದೇಶಿಕ ಪರಿಷತ್ತುಗಳು RCOF ಗಳನ್ನು ವಿನಂತಿಸಬಹುದು. ಭೌತಿಕ ಪರಿಶೀಲನೆಯ ನಂತರವೇ ಪ್ರಾದೇಶಿಕ ಪರಿಷತ್ತುಗಳು ಗುಂಪುಗಳನ್ನು ಅನುಮೋದನೆ (endorse) ಮಾಡಬಹುದು.

j) ಕೆಲವು ಸರ್ಕಾರಿ ಯೋಜನೆಗಳಡಿಯಲ್ಲಿ (ಪರಂಪರಾಗತ ಕೃಷಿ ವಿಕಾಸ ಯೋಜನೆಯಂತಹ) ಗುಂಪುಗಳನ್ನು ರಚಿಸಬೇಕಾದ ಸಂದರ್ಭಗಳಲ್ಲಿ ಗುಂಪಿನ ಅನುಮೋದನೆಯನ್ನು ಅನುಷ್ಠಾನಗೊಳಿಸುತ್ತಿರುವ ರಾಜ್ಯ ಸರ್ಕಾರದ ಇಲಾಖೆಯ ಅಧಿಕೃತ ಜಿಲ್ಲಾಧಿಕಾರಿ/ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡಿರುವವರು ಮಾಡಬಹುದು.

k) ಕಾಲಕಾಲಕ್ಕೆ ಸಭೆಗಳನ್ನು ಆಯೋಜಿಸಿ ಹಾಜರಾತಿ ನೋಂದಣಿಯನ್ನು ನಿರ್ವಹಿಸಬೇಕು. ಈ ಸಭೆಗಳಲ್ಲಿ ಸದಸ್ಯರ ಭಾಗವಹಿಸುವಿಕೆ ಖಡ್ಡಾಯ ಚಟುವಟಿಕೆಯಾಗಿದೆ ಮತ್ತು ಇದು ಗುಂಪಿನ ಸದಸ್ಯರ ಖಾತರಿ ಯೋಜನೆಯ ಕಾರಣಕ್ಕಾಗಿ ಸದಸ್ಯರ ಸಮರ್ಪಣೆಯ ಸೂಚನೆಯಾಗಿರುತ್ತದೆ. ವರ್ಷಕ್ಕೆ ಕನಿಷ್ಠ 2-4 ಬಾರಿ (ಬಹುವಾರ್ಷಿಕ ಬೆಳೆ ಗುಂಪಿಗೆ ವರ್ಷಕ್ಕೆ 2 ಬಾರಿ ಮತ್ತು ವಾರ್ಷಿಕ ಬೆಳೆ ಗುಂಪಿಗೆ ವರ್ಷಕ್ಕೆ 4 ಬಾರಿ) ಖಡ್ಡಾಯ ಸಭೆಗಳು ವರ್ಷದ ಪ್ರಮುಖ ಸಮಯಗಳಲ್ಲಿ ಋತು, ಬೆಳೆಗಳು ಇತ್ಯಾದಿಗಳ ಆಧಾರದ ಮೇಲೆ ಇರಬೇಕು. ಒಂದು/ಎರಡು ಸಭೆಗಳನ್ನು ಪೀರ್ ಮೌಲ್ಯಮಾಪನಕ್ಕಾಗಿ ಮತ್ತು ಒಂದು/ಎರಡು ಸಭೆಗಳನ್ನು ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿ ನಡೆಸಬೇಕು.

l) ಪ್ರತಿ ಸದಸ್ಯರು ಒಂದು ವರ್ಷದಲ್ಲಿ ಕನಿಷ್ಠ 50% ಸಭೆಗಳಿಗೆ ಹಾಜರಾಗಬೇಕು ಮತ್ತು ಹಾಜರಾತಿ ನೋಂದಣಿಗೆ ಸಹಿ ಮಾಡಬೇಕು.

m) ಒಟ್ಟಾರೆಯಾಗಿ ಗುಂಪಿನ ಸಾಮರ್ಥ್ಯವನ್ನು ಸುಧಾರಿಸಲು ಪರಸ್ಪರ ಸಲಹೆ ನೀಡಿ ಮಾಹಿತಿಯನ್ನು ಹಂಚಿಕೊಳ್ಳಬೇಕು.

n) ಇತರ ಗುಂಪುಗಳು, ಪ್ರಾದೇಶಿಕ ಪರಿಷತ್ತಿನ ಸದಸ್ಯರು ಅಥವಾ ಇತರ ರಾಜ್ಯ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ತಜ್ಞರಿಂದ ಸಾವಯವ ಕೃಷಿಕರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

o) ಪ್ರತಿ ಜಮೀನಿನ ಪೀರ್ ಅಪ್ರೈಸಲ್‌ನ ಸಮಯೋಚಿತ ಮೌಲ್ಯಮಾಪನವನ್ನು ವರ್ಷಕ್ಕೆ ಎರಡು ಬಾರಿ ಖಚಿತವಾಗಿ ಮಾಡುವುದರ ಬಗ್ಗೆ ಯೋಜನೆ ರೂಪಿಸಬೇಕು. ಪೀರ್ ವಿಮರ್ಶಕರು ಪೀರ್ ವಿಮರ್ಶೆಯ ಮೌಲ್ಯಮಾಪನ ಮಾದರಿ (form) ಯನ್ನು ಪೂರ್ಣಗೊಳಿಸಿ ಸಹಿ ಮಾಡಿದ ಮತ್ತು ಗುಂಪಿನ ನಾಯಕನಿಗೆ ಸಲ್ಲಿಸಿರುವುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಪ್ರತಿಯೊಬ್ಬ ರೈತರನ್ನು ಕನಿಷ್ಠ ಇಬ್ಬರು ಸದಸ್ಯರ ತಂಡದಿಂದ ಮೌಲ್ಯಮಾಪನ ಮಾಡಬೇಕು. ಗ್ರಾಹಕರ ಪ್ರತಿನಿಧಿಯನ್ನು ಸೇರಿಸುವುದರಿಂದ ವಿಶ್ವಾಸಾರ್ಹತೆ ಮತ್ತು ನಂಬಿಕೆ ಹೆಚ್ಚಾಗುತ್ತದೆ.

p) ಪೀರ್ ವಿಮರ್ಶಕರ ಮಾದರಿ (form) ಗಳ ತಪಾಸಣೆಯನ್ನು ಮತ್ತೊಂದು ಪೀರ್ ವಿಮರ್ಶಕ ಗುಂಪಿನಿಂದ ಮಾಡುವುದು. ವಿಶ್ವಾಸಾರ್ಹತೆ ಮತ್ತು ನಂಬಿಕೆಯನ್ನು ಹೆಚ್ಚಿಸಲು ಗುಂಪು ಯಾವುದೇ ಸಂಖ್ಯೆಯ ಪೀರ್ ವಿಮರ್ಶಕರನ್ನು ಹೊಂದಿರಬಹುದು.

q) ಪ್ರತಿ ಗುಂಪಿನ ಸದಸ್ಯರಿಗೆ ಸಂಬಂಧಿಸಿದಂತೆ ಎಲ್ಲಾ ಪೀರ್ ಅಪ್ರೈಸಲ್ ಶೀಟ್‌ಗಳನ್ನು ಭವಿಷ್ಯದ ಮೇಲ್ವಿಚಾರಣೆ ಚಟುವಟಿಕೆಗಾಗಿ ಸ್ಥಳೀಯ ಗುಂಪು ಮುದ್ರಿತ ಪ್ರತಿ (hard copy) ಯಲ್ಲಿ ಅಥವಾ ಡಿಜಿಟಲ್‌ನಲ್ಲಿ ನಿರ್ವಹಿಸಬೇಕು. ಇವುಗಳನ್ನು ಸಾರ್ವಜನಿಕ ಡೊಮೇನ್‌ನಲ್ಲಿ

ಲಭ್ಯವಾಗುವಂತೆ ಮಾಡಬೇಕು ಮತ್ತು ಭೌತಿಕ ಮೇಲ್ವಿಚಾರಣೆಯ ಸಮಯದಲ್ಲಿ ಬೇಡಿಕೆಯ ಮೇರೆಗೆ ಆರ್‌ಸಿ ಅಥವಾ ಶಾಸನಬದ್ಧ ಪ್ರಾಧಿಕಾರಕ್ಕೆ ಒದಗಿಸಬೇಕು.

r) ಸೂಕ್ತ ಸಮಯದಲ್ಲಿ ಯಾವ ರೈತರನ್ನು ಪ್ರಮಾಣೀಕರಿಸಬೇಕೆಂದು ಗುಂಪು ನಿರ್ಧರಿಸುತ್ತದೆ. ಪ್ರಮಾಣೀಕರಣದ ಅವಶ್ಯಕತೆಗಳನ್ನು ಇನ್ನೂ ಅನುಸರಿಸದ ರೈತರನ್ನು ಪ್ರತ್ಯೇಕಿಸಿ. ಡೀಫಾಲ್ಟರ್‌ಗಳನ್ನು ಪಟ್ಟಿ ಮಾಡಿ ನಿರ್ಬಂಧಗಳನ್ನು ವಿಧಿಸಬೇಕು.

s) ಅಂತಿಮ ನಿರ್ಧಾರದ ಸಭೆಯನ್ನು ಆಯೋಜಿಸಿ, ಎಲ್ಲಾ ಸದಸ್ಯರಿಗೆ ಪೀರ್ ಮೌಲ್ಯಮಾಪನ ಫಲಿತಾಂಶಗಳನ್ನು ವಿವರಿಸಬೇಕು. ಗುಂಪು ಒಟ್ಟಾಗಿ PGS ಮಾನದಂಡಗಳಿಗೆ ಅನುಗುಣವಾಗಿದೆ ಎಂದು ಘೋಷಿಸಬೇಕು (ಸಣ್ಣ ಗುಂಪುಗಳ ಸಂದರ್ಭದಲ್ಲಿ, 10 ಸದಸ್ಯರವರೆಗೆ). ಗುಂಪು ದೊಡ್ಡದಾಗಿದ್ದರೆ, 5 ಅಥವಾ ಹೆಚ್ಚಿನ ಸದಸ್ಯರನ್ನು ಒಳಗೊಂಡಿರುವ ಉಪ-ಗುಂಪು ಅಥವಾ ಪ್ರಮಾಣೀಕರಣ ಸಮಿತಿಯನ್ನು ಆಯ್ಕೆ ಮಾಡಿ, ಅದು ಫಲಿತಾಂಶಗಳನ್ನು ಪರಿಶೀಲಿಸಬಹುದು ಮತ್ತು ಪ್ರಮಾಣೀಕರಣವನ್ನು ನಿರ್ಧರಿಸಬಹುದು. ಬಹುಪಾಲು ಗುಂಪಿನ ಸದಸ್ಯರ ಅನುಮೋದನೆಯು ನಕಾರಾತ್ಮಕ ನಿರ್ಧಾರದ ಸಂದರ್ಭಗಳಲ್ಲಿ ಮಾತ್ರ ಅಗತ್ಯವಿದೆ (ಪ್ರಮಾಣೀಕರಣದ ನಿರಾಕರಣೆ ಅಥವಾ ಪ್ರಮಾಣೀಕರಣವನ್ನು ವಾಪಸ್ ತೆಗೆದುಕೊಳ್ಳುವುದು). ಪೂರ್ಣ ಸದಸ್ಯರ ಗುಂಪು ಪ್ರಮಾಣೀಕರಣ [illegible] ಪ್ರಮಾಣೀಕರಿಸಬಹುದು.

t) ಸೂಕ್ತ ಸಮಯದಲ್ಲಿ ಸಭೆಯ ನಿರ್ಧಾರದ ಮತ್ತು ನಿರೀಕ್ಷಿತ ವೈಯಕ್ತಿಕ ಉತ್ಪನ್ನಗಳ [illegible] ಕಾರ್ಯ [illegible] .ರೈತರ ಪಟ್ಟಿಯೊಂದಿಗೆ ಪೀರ್ ಅಪ್ರೈಸಲ್ ಸಾರಾಂಶವನ್ನು ತಯಾರಿಸಬೇಕು.

u) PGS-India ವೆಬ್‌ಸೈಟ್‌ನಲ್ಲಿ ಸಂಪೂರ್ಣ ಗುಂಪಿನ ಪೀರ್ ಅಪ್ರೈಸಲ್ ಸಾರಾಂಶದ ಶೀಟ್ ಅನ್ನು ಅಗತ್ಯ ಗುಂಪಿನ ನಿರ್ಧಾರದೊಂದಿಗೆ ಅಪ್‌ಲೋಡ್ ಮಾಡಿ ಸಹಿ ಮಾಡಿದ ಪ್ರತಿಯನ್ನು ಪೋಸ್ಟ್ ಮೂಲಕ ಪ್ರಾದೇಶಿಕ ಪರಿಷತ್ತಿಗೆ ಕಳುಹಿಸಿ ಕೊಡಬೇಕು.

v) ಆನ್‌ಲೈನ್‌ನಲ್ಲಿ ಪ್ರಾದೇಶಿಕ ಪರಿಷತ್ತು ಅನುಮೋದಿಸಿದ ನಂತರ, ಪ್ರಾದೇಶಿಕ ಪರಿಷತ್ತು ಪ್ರಮಾಣಪತ್ರವನ್ನು ನೀಡುತ್ತದೆ.

## 4.3 ವ್ಯಕ್ತಿಗತ ಉತ್ಪಾದಕರ ಪಾತ್ರ ಮತ್ತು ಜವಾಬ್ದಾರಿ

ಒಬ್ಬ ವ್ಯಕ್ತಿಗತ ರೈತರು (ಅಥವಾ 5 ಕ್ಕಿಂತ ಕಡಿಮೆ ರೈತರ ಗುಂಪು) PGS- India ಪ್ರಮಾಣೀಕರಣದಲ್ಲಿ ಆಸಕ್ತಿ ಹೊಂದಿದ್ದರೆ ಮತ್ತು ಸುತ್ತಮುತ್ತಲಿನ ಯಾವುದೇ ಗುಂಪು ಇಲ್ಲದಿದ್ದರೆ ಮತ್ತು ಯಾವುದೇ ಹೆಚ್ಚುವರಿ ಸಮುದಾಯ ಸದಸ್ಯರು ಗುಂಪನ್ನು ರಚಿಸಲು ಸಿದ್ಧರಿಲ್ಲದಿದ್ದರೆ, ವೈಯಕ್ತಿಕ ಉತ್ಪಾದಕರು ನೋಂದಣಿಗಾಗಿ ಪ್ರಾದೇಶಿಕ ಪರಿಷತ್ತಿಗೆ ನೇರವಾಗಿ ಅರ್ಜಿ ಸಲ್ಲಿಸಬಹುದು.

a) ಲಭ್ಯವಿರುವ ಪ್ರಾದೇಶಿಕ ಪರಿಷತ್ತಿಗೆ ಸಹಿ ಮಾಡಿದ ಅರ್ಜಿ ನಮೂನೆ, ಪ್ರತಿಜ್ಞೆ ಮತ್ತು ಸ್ಥಳೀಯ ಗುಂಪನ್ನು ರಚಿಸಲು ಅವರ ಪ್ರಸ್ತುತ ಅಸಮರ್ಥತೆಯನ್ನು ತಿಳಿಸುವ ಸಹಿ ಮಾಡಿದ ಘೋಷಣೆಯೊಂದಿಗೆ ಅರ್ಜಿಯನ್ನು ಕೊಡಬೇಕು.

b) ಜಮೀನಿಗೆ ಭೌತಿಕವಾಗಿ ಭೇಟಿ ನೀಡಿ ಅರ್ಜಿಯನ್ನು ಅನುಮೋದಿಸಲು ಇತರ PGS- India ಗುಂಪಿನ ಸದಸ್ಯರನ್ನು ಆಹ್ವಾನಿಸಬೇಕು. ಯಾವುದೇ PGS- India ಗುಂಪು ಲಭ್ಯವಿಲ್ಲದಿದ್ದರೆ, ಜಮೀನನ್ನು ಭೌತಿಕವಾಗಿ ಪರಿಶೀಲಿಸಲು ಪ್ರಾದೇಶಿಕ ಪರಿಷತ್ತಿಗೆ ವಿನಂತಿಸಬೇಕು.

c) ಹತ್ತಿರದ ಗುಂಪಿನಿಂದ ಅಥವಾ ಪ್ರಾದೇಶಿಕ ಪರಿಷತ್ತಿನಿಂದ PGS- India ದ ಕಾರ್ಯಾಚರಣೆಯ ಮಾರ್ಗಸೂಚಿಗಳು ಮತ್ತು ಮಾನದಂಡಗಳನ್ನು ಪಡೆದುಕೊಳ್ಳಬೇಕು.

d) ನೋಂದಣಿಯನ್ನು ಅನುಮೋದಿಸಲು ಮತ್ತು PGS-India ವೆಬ್‌ಸೈಟ್‌ನ ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಪಡೆಯಲು ಪ್ರಾದೇಶಿಕ ಪರಿಷತ್ತಿಗೆ ವಿನಂತಿಸಬೇಕು.

e) ಜಮೀನನ್ನು ಭೌತಿಕವಾಗಿ ಪರೀಕ್ಷಿಸಲು ಮತ್ತು ಪೀರ್ ಅಪ್ರೈಸಲ್ ಅರ್ಜಿಯನ್ನು ಭರ್ತಿ ಮಾಡಲು ಹತ್ತಿರದ ಗುಂಪಿನ ಪೀರ್ ಮೌಲ್ಯಮಾಪಕರನ್ನು ವಿನಂತಿಸಬೇಕು. ಭರ್ತಿಮಾಡಿದ ಪೀರ್ ಅಪ್ರೈಸಲ್ ಅರ್ಜಿಗಳನ್ನು ಪ್ರಾದೇಶಿಕ ಪರಿಷತ್ತಿಗೆ ಸಲ್ಲಿಸಬೇಕು. ಒಂದು ವೇಳೆ ಯಾವುದೇ ಗುಂಪು ಹತ್ತಿರದಲ್ಲಿಲ್ಲದಿದ್ದರೆ, ಭೌತಿಕ ತಪಾಸಣೆ ಮತ್ತು ಪ್ರಮಾಣೀಕರಣವನ್ನು ಪ್ರಾದೇಶಿಕ ಪರಿಷತ್ತಿಗೆ ವಹಿಸಬೇಕು.

f) ವ್ಯಕ್ತಿಗತ [illegible]. ಮಧ್ಯಂತರ ವ್ಯವಸ್ಥೆಯಾಗಿದೆ ಮತ್ತು ಉತ್ಪಾದಕರು ಗ್ರಾಮ ಸಮುದಾಯದಿಂದ ಇತರ ಸದಸ್ಯರನ್ನು ಸರಿಯಾದ ಸಮಯದಲ್ಲಿ (ಗರಿಷ್ಠ 2 ವರ್ಷಗಳು) ರಚಿಸಲು ಮತ್ತು ವ್ಯಕ್ತಿಗತ ಸ್ಥಿತಿಯನ್ನು ಗುಂಪಿನ ಸ್ಥಿತಿಗೆ ಪರಿವರ್ತಿಸಲು ಪ್ರಯತ್ನಗಳನ್ನು ಪ್ರಾರಂಭಿಸಬೇಕು. 2 ವರ್ಷಗಳ ನಂತರವೂ ಒಬ್ಬ ವ್ಯಕ್ತಿಗತ ರೈತರಿಗೆ ಗುಂಪನ್ನು ರಚಿಸಲು ಸಾಧ್ಯವಾಗದಿದ್ದರೆ, ಪ್ರಾದೇಶಿಕ ಪರಿಷತ್ತು ಅಂತಹ ವ್ಯಕ್ತಿಗತ ರೈತರನ್ನು ಹತ್ತಿರದ ಗುಂಪಿನೊಂದಿಗೆ ಸೇರಿಸುತ್ತದೆ.

## 4.4 ಜಮೀನಿನಿಂದ ಮತ್ತು PGS – ಗುಂಪುಗಳಿಂದ ಹೊರಗೆ ಕೈಗೊಳ್ಳುವ ಸಂಸ್ಕರಣೆ ಮತ್ತು ನಿರ್ವಹಣಾ ಘಟಕಗಳು/ಸೌಲಭ್ಯಗಳು

ಸಾಮೂಹಿಕ ಸಂಸ್ಕರಣೆ ಮತ್ತು ವ್ಯಾಪಾರಕ್ಕಾಗಿ ಒಂದು ಅಥವಾ ಹೆಚ್ಚಿನ PGS ಗುಂಪುಗಳಿಂದ PGS ಪ್ರಮಾಣೀಕೃತ ಸಾವಯವ ಉತ್ಪನ್ನಗಳ ಸಂಗ್ರಹಣೆ, ಒಟ್ಟುಗೂಡಿಸುವಿಕೆ ಸಂಸ್ಕರಣೆ ಮತ್ತು ನಿರ್ವಹಣೆಯನ್ನು ಖಚಿತಪಡಿಸಿಕೊಂಡು PGS- India ಯೋಜನೆಯು PGS ಗುಂಪುಗಳಿಂದ ಹೊರಗೆ ಈ ಅದ್ವಿತೀಯ ಸೌಲಭ್ಯ (stand – alone facilities) ಗಳನ್ನು ಅನುಮೋದಿಸಲು ನಿರ್ದಿಷ್ಠ ನಿಬಂಧನೆಗಳನ್ನು ಒದಗಿಸುತ್ತದೆ. ಅಂತಹ ಚಟುವಟಿಕೆಗಳು ಭಾಗವಹಿಸುವಿಕೆ ಚಟುವಟಿಕೆವಲ್ಲವಾದ್ದರಿಂದ, ಈ ಅನುಮೋದನೆ ವ್ಯವಸ್ಥೆಯು ಅನುಸರಣೆ ಮೌಲ್ಯಮಾಪನ ವ್ಯವಸ್ಥೆಯನ್ನು ಆಧರಿಸಿರುತ್ತದೆ.

PGS ಗುಂಪುಗಳಿಂದ ಹೊರಗೆ ಸಂಸ್ಕರಣೆ ಮತ್ತು ನಿರ್ವಹಣಾ ಅನುಮೋದನೆ" ಗೆ ಅಧಿಕೃತವಾಗಿರುವ ಪ್ರಾದೇಶಿಕ ಪರಿಷತ್ತು ಮಾತ್ರ ಅಂತಹ ಘಟಕಗಳನ್ನು ನೋಂದಾಯಿಸಬಹುದು ಮತ್ತು ಅಗತ್ಯ ಮೌಲ್ಯಮಾಪನದ ನಂತರ ಸಾವಯವ ಸಂಸ್ಕರಣೆಗಾಗಿ ಅವುಗಳ ಸೌಲಭ್ಯಗಳನ್ನು ಅನುಮೋದಿಸಬಹುದು.

b) ಅರ್ಜಿದಾರರ ಸಂಸ್ಕರಣೆ ಮತ್ತು ವ್ಯಾಪಾರ ಘಟಕವು ಕಾನೂನಿನ ಪ್ರಕಾರ ಅಗತ್ಯವಿರುವ ಪರವಾನಗಿಗಳು ಮತ್ತು FSSAI ಮತ್ತು/ಅಥವಾ ಅಂತಹ ಇತರ ಪರವಾನಗಿ ಪ್ರಾಧಿಕಾರಗಳಿಂದ ಕಾನೂನುಬದ್ಧವಾಗಿ ಅನುಮೋದನೆಗೊಂಡಿರುವ ನೋಂದಾಯಿತ ಸಂಸ್ಥೆಯಾಗಿರಬೇಕು.

c) ಉದ್ದೇಶಿತ ಸಂಸ್ಕರಣೆ ಮತ್ತು ನಿರ್ವಹಣೆಗೆ ಅಗತ್ಯವಾದ ಮೂಲಸೌಕರ್ಯವನ್ನು ಹೊಂದಿರಬೇಕು.

d) PGS- India ದ ಮಾನದಂಡಗಳು ಮತ್ತು ಪ್ರಮಾಣೀಕರಣದ ಅಗತ್ಯತೆಗಳೊಂದಿಗೆ ಸಂಪೂರ್ಣವಾಗಿ ತಿಳಿದಿರುವ ಮತ್ತು ಸಂವಾದಕ ಮತ್ತು ಸಂಪೂರ್ಣ ಕಾರ್ಯಾಚರಣೆಗಾಗಿ ಕಾರ್ಯಾಚರಣಾ ಕೈಪಿಡಿ, ಸ್ವರೂಪಗಳು ಮತ್ತು ಪರಿಶೀಲನಾಪಟ್ಟಿಗಳನ್ನು ಅಭಿವೃದ್ಧಿಪಡಿಸಿರಬೇಕು. ಈ ಪ್ರಕ್ರಿಯೆಯ ಮೂಲಕ ವಸ್ತುಗಳ ಹರಿವು ಮತ್ತು ಕಚ್ಚಾ ವಸ್ತು (ಗಳ) ರಶೀದಿಯಿಂದ ಸಂಸ್ಕರಣೆ ಮತ್ತು ನಿರ್ವಹಣೆ, ಪ್ಯಾಕಿಂಗ್ ಮತ್ತು ಅಂತಿಮವಾಗಿ PGS ಅಲ್ಲದ ನಿರ್ವಾಹಕ ಅಥವಾ ಗ್ರಾಹಕರಿಗೆ ಮಾರಾಟವಾಗುವವರೆಗೆ ತಡೆರಹಿತ ಲೆಕ್ಕಪರಿಶೋಧನಾ ದಾಖಲೆ (audit trial) ಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರಬೇಕು.

e) ಸಂಸ್ಕರಣೆ ಮತ್ತು ನಿರ್ವಹಣಾ ಸಂಸ್ಥೆಗಳು ದಾಖಲಾತಿಗಳು, ಪಾಕವಿಧಾನಗಳು, ಕಚ್ಚಾ ವಸ್ತುಗಳು ಮತ್ತು ಸಂಸ್ಕರಿಸಿದ ಉತ್ಪನ್ನಗಳ ದಾಸ್ತಾನು ಮತ್ತು ಮಾರಾಟ ಮತ್ತು ಖರೀದಿ ದಾಖಲೆಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಪ್ರಾದೇಶಿಕ ಪರಿಷತ್ತಿಗೆ ನೀಡಬೇಕು. ಮಾಹಿತಿ, ದಾಖಲಾತಿ ಮತ್ತು ಸೌಲಭ್ಯಗಳಿಗೆ ಭೌತಿಕ ಪ್ರವೇಶವನ್ನು ತಡೆಹಿಡಿಯುವುದು ಪ್ರಮಾಣೀಕರಣ [illegible] ಕಾರಣವಾಗಬಹುದು.

f) RC [illegible] ಘಟಕಗಳನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುತ್ತದೆ.

# ಅಧ್ಯಾಯ 5

## ಪ್ರಮಾಣೀಕರಣ ಪ್ರಕ್ರಿಯೆ

### 5.1 ಸ್ಥಳೀಯ ಗುಂಪಿನಿಂದ ಪ್ರಮಾಣೀಕರಣ ಪ್ರಕ್ರಿಯೆ (LG)

**ಹಂತ 1**

a) ಕನಿಷ್ಠ 5 ರೈತರನ್ನು ಒಳಗೊಂಡ ಗುಂಪನ್ನು ರಚಿಸಬೇಕು (ಮೇಲಾಗಿ ಒಂದು ಗ್ರಾಮಕ್ಕೆ ಸೇರಿದವರು ಅಥವಾ ಪಕ್ಕದ ಹಳ್ಳಿಗಳನ್ನು ಹೊಂದಿರುವ ಪ್ರಾಂತ್ಯದವರಾಗಿರಬೇಕು).

b) ಕೆಲವು ರೈತರ ಮೇಲೆ ನಿರ್ಬಂಧ ಕ್ರಮವನ್ನು ಕೈಗೊಂಡಾಗ ಅಥವಾ ಕೆಲವು ರೈತರು ಗುಂಪನ್ನು ತೊರೆದಾಗ ಗುಂಪಿನ ಸ್ಥಿತಿಯನ್ನು ಕಾಯ್ದುಕೊಳ್ಳಲು, ಸುಮಾರು 7-10 ರೈತರ ಗುಂಪನು ಹೊಂದಲು ಸಲಹೆ ನೀಡಲಾಗುತದೆ.

| |
|---|
| ಕೆಲವು ರೈತರ ಮೇಲೆ ನಿರ್ಬಂಧ ಕ್ರಮವನ್ನು ಕೈಗೊಂಡಾಗ ಅಥವಾ ಕೆಲವು ರೈತರು ತೊರೆದ ಪರಿಣಾಮವಾಗಿ, ಸದಸ್ಯರ ಸಂಖ್ಯೆ 5 ಕ್ಕಿಂತ ಕಡಿಮೆಯಾದರೆ ಗುಂಪಿನ ಸ್ಥಿತಿಯು ಗುಂಪಿನಿಂದ ವ್ಯಕ್ತಿಗತ ಉತ್ಪಾದಕರಾಗಿ ಬದಲಾಗುತ್ತದೆ. ಅಂತಹ ಎಲ್ಲಾ ಸಂದರ್ಭಗಳಲ್ಲಿ ಪ್ರಮಾಣೀಕರಣವು ಪ್ರಾದೇಶಿಕ ಪರಿಷತ್ತಿನಿಂದ ತಪಾಸಣೆಗೆ ಒಳಪಟ್ಟಿರುತ್ತದೆ ಅಥವಾ ಅವರು ಮತ್ತೊಂದು ಹತ್ತಿರದ ಗುಂಪಿನಿಂದ ಪೀರ್ ತಪಾಸಣೆಯನ್ನು ನಿರ್ವಹಿಸಬೇಕಾಗುತ್ತದೆ ಅಥವಾ ಅಂತಹ ರೈತರು ಮತ್ತೊಂದು ಗುಂಪಿನ ಭಾಗವಾಗಬೇಕಾಗುತ್ತದೆ. ಪ್ರಾದೇಶಿಕ ಪರಿಷತ್ತಿನಿಂದ ವ್ಯಕ್ತಿಗತ ರೈತ ಎಂದು ಪ್ರಮಾಣೀಕರಿಸಲು [illegible] |

c) ಎಲ್ಲಾ ಸದಸ್ಯರಿಂದ ನೋಂದಣಿ ಮತ್ತು ಜಮೀನಿನನ್ನು ನಿರ್ವಹಿಸಿದ ಇತಿಹಾಸದ ದಾಖಲಾತಿಯನ್ನು ಸಂಗ್ರಹಿಸಬೇಕು.

d) ಹತ್ತಿರದ ಪ್ರಾದೇಶಿಕ ಪರಿಷತ್ತಿನಿಂದ PGS-India ಮಾನದಂಡಗಳು ಮತ್ತು PGS-India ಕಾರ್ಯಾಚರಣಾ ದಾಖಲೆಗಳ ಪ್ರತಿಗಳನ್ನು ಪಡೆದುಕೊಳ್ಳಬೇಕು ಮತ್ತು ಎಲ್ಲಾ ಸದಸ್ಯರಿಗೆ ವಿತರಿಸಬೇಕು. ಈ ದಾಖಲೆಗಳನ್ನು PGS-India ವೆಬ್‌ಸೈಟ್‌ನಿಂದಲೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದು.

e) ಪ್ರತಿಜ್ಞೆಗೆ ಸಹಿ ಹಾಕಲು ಸರ್ವ ಸದಸ್ಯರ ಸಭೆಯನ್ನು ಕರೆಯಬೇಕು.

f) ಎಲ್ಲಾ ಸದಸ್ಯರು PGS- India ದ ಮಾನದಂಡಗಳ ಅವಶ್ಯಕತೆಗಳನ್ನು ನಿರಂತರವಾಗಿ ಅನುಸರಿಸಲು ತಮ್ಮ ಬೇಸಾಯ ಕ್ರಮಗಳನ್ನು ತಿದ್ದುಪಡಿ/ಮಾರ್ಪಾಡು ಮಾಡಿಕೊಳ್ಳುವ ಅಗತ್ಯವಿರುತ್ತದೆ. ಈ ಕ್ರಮಗಳು ಮಾನದಂಡಗಳಿಗನುಗುಣವಾಗಿರಬೇಕು ಮತ್ತು ಈ ಮಾನದಂಡಗಳಿಗನುಗುಣವಾಗಿ ಮುಂದುವರೆಸಿಕೊಂಡು ಹೋಗಬೇಕು.

g) PGS-India ದ ವಿಶಾಲ ಮಾರ್ಗಸೂಚಿಗಳ ಆಧಾರದ ಮೇಲೆ ರೈತರು ನಿರ್ವಹಿಸಬೇಕಾದ ದಾಖಲೆಗಳ ಅಗತ್ಯತೆಗಳು, ಪೀರ್ ಅಪ್ರೈಸಲ್ ಕಾರ್ಯವಿಧಾನಗಳನ್ನು ಮತ್ತು ಪರಿಶೀಲನಾ ಅಂಶಗಳನ್ನು ನಿರ್ಣಯಿಸಲು ಸ್ಥಳೀಯ ಗುಂಪಿನ ಕಾರ್ಯಾಚರಣೆಯ ಕೈಪಿಡಿಯನ್ನು ತಯಾರಿಸಬೇಕು. (PGS-India ವೆಬ್‌ಸೈಟ್‌ನಲ್ಲಿ ಲಭ್ಯವಿದೆ).

h) PGS-India ಯೋಜನೆಯ ಅಡಿಯಲ್ಲಿ (ವಿಭಜಿತ ಉತ್ಪಾದನೆ ಕೈಗೊಳ್ಳುವಾಗ) ತಮ್ಮ ಸಂಪೂರ್ಣ ಜಮೀನನ್ನು/ಬೇಸಾಯ ಕ್ರಮಗಳನ್ನು ಸಾವಯವಕ್ಕೆ ಮಾರ್ಪಾಡು ಮಾಡದಿದ್ದ ಪಕ್ಷದಲ್ಲಿ, ಸದಸ್ಯರು ಸ್ಪಷ್ಟ ಮತ್ತು ವಿಭಿನ್ನವಾದ ಕ್ರಮಗಳನ್ನು ಅನುಸರಿಸುವುದರ ಮೂಲಕ ಸಾವಯವ ಘಟಕಗಳನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡಬೇಕು. ಸಾವಯವ ಮತ್ತು ಸಾವಯವವಲ್ಲದ ಘಟಕಗಳನ್ನು ಬೇರ್ಪಡಿಸಲು ಬಫರ್ ವಲಯಗಳ ನಿರ್ವಹಣೆ ಮತ್ತು ಒಕ್ಕಣೆ ಮಾಡುವ ಸೌಲಭ್ಯಗಳನ್ನು ಒಳಗೊಂಡಂತೆ ಸಂಗ್ರಹಣಾ ಘಟಕಗಳು ಇತ್ಯಾದಿಗಳನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ರೈತರು ಸಾವಯವ ಕಾರ್ಯಾಚರಣೆಗಳ ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ತಮ್ಮ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಬೇಕು.

i) PGS ವೆಬ್‌ಸೈಟ್‌ನ ಮುಖಾಂತರ ಗುಂಪನ್ನು ನೋಂದಾಯಿಸಿ ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಸೃಷ್ಟಿ (generate) ಮಾಡಬೇಕು.

j) ನೋಂದಣಿ ಮಂಜೂರು ಮಾಡಲು ಪ್ರಾದೇಶಿಕ ಪರಿಷತ್ತಿಗೆ ವಿನಂತಿಸಬೇಕು.

**ಹಂತ 2**

a) ಗುಂಪು ಸಭೆಗಳು, ಪ್ರಮುಖ ಕ್ಷೇತ್ರ ತರಬೇತಿಗಳು ಮತ್ತು ಜ್ಞಾನ ಹಂಚಿಕೆಯ ಕಾರ್ಯಕ್ರಮಗಳಲ್ಲಿ PGS ಮಾರ್ಗಸೂಚಿಗಳನ್ನು ಅನುಸರಿಸಬೇಕು.

b) ಎಲ್ಲಾ ಸದಸ್ಯರು ತಮ್ಮ ಉತ್ಪಾದನಾ ಪ್ರಕ್ರಿಯೆಯಲ್ಲಿ ಮಾನದಂಡಗಳನ್ನು ಅನುಸರಿಸುತ್ತಾರೆಯೇ ಎಂದು ಖಚಿತಪಡಿಸಿಕೊಳ್ಳಬೇಕು.

c) ಇತರ ಸದಸ್ಯರ ಜಮೀನುಗಳಲ್ಲಿ ಅನುಸರಿಸುವ ಕ್ರಮಗಳ ಬಗ್ಗೆ ಗಮನವಿರಬೇಕು. ಒಂದು ವೇಳೆ ಮಾನದಂಡನೆಗಳಿಗನುಸಾರವಲ್ಲದ ಅನುಸರಣೆಗಳನ್ನು ಗಮನಿಸಿದರೆ ಗುಂಪು ಸಭೆಗಳ ಸಮಯದಲ್ಲಿ ಗುಂಪಿನ ಸದಸ್ಯರಿಗೆ ತಿಳಿಸಬೇಕು.

d) ಕಾಲಕಾಲಕ್ಕೆ ಗುಂಪಿನ ಸಭೆಗಳನ್ನು ಆಯೋಜಿಸಿ ಮತ್ತು ಅಗತ್ಯ ದಾಖಲೆಗಳನ್ನು ನಿರ್ವಹಿಸಬೇಕು.

e) ಪ್ರಾದೇಶಿಕ ಪರಿಷತ್ತಿನ ಸಹಯೋಗದೊಂದಿಗೆ ಸಕಾಲದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

f) ಪ್ರಮುಖ ತರಬೇತಿಗಳು ಮತ್ತು ಗುಂಪು ಸಭೆಗಳಲ್ಲಿ ಪೋಷಕಾಂಶ ನಿರ್ವಹಣೆ, ಪೀಡೆ ನಿರ್ವಹಣೆ ಇತ್ಯಾದಿ, ಸಮಸ್ಯೆಗಳ ಪರಿಹಾರಕ್ಕಾಗಿ ಸಾವಯವ ಕೃಷಿಕರು ಮತ್ತು ಇತರ ಸ್ಥಳೀಯ ತಜ್ಞರನ್ನು ಆಹ್ವಾನಿಸಬೇಕು.

g) ಸದಸ್ಯ ರೈತರು ತಮ್ಮ ಜಮೀನಿನ ಹೊರತಾಗಿ ಹೊರಗಿನ ಪರಿಕರಗಳನ್ನು ಬಳಸುತ್ತಿದ್ದರೆ ಅಥವಾ ಬಳಸಲು ಪ್ರಸ್ತಾಪಿಸಿದರೆ, ಅವರ ಸಾವಯವ ಸ್ಥಿತಿಯನ್ನು ಪರಿಶೀಲಿಸಬೇಕು, ಗುಂಪು ಸಭೆಗಳಲ್ಲಿ ಚರ್ಚಿಸಬೇಕು ಮತ್ತು ಅವುಗಳ ಬಳಕೆಯನ್ನು ಅನುಮೋದಿಸಬೇಕು ಅಥವಾ ನಿಷೇಧಿಸಬೇಕು. ಗುಂಪಿನ ಅನುಮೋದನೆಯಿಲ್ಲದೆ ಅಂತಹ ಪರಿಕರಗಳ ಬಳಕೆಯನ್ನು ಮಾನದಂಡನೆಗಳಿಗನುಸಾರವಲ್ಲದ ಅನುಸರಣೆ ಎಂದು ಪರಿಗಣಿಸಲಾಗುತ್ತದೆ.

h) ಪ್ರಾದೇಶಿಕ ಪರಿಷತ್ತಿನ/ ಪರಿಷತ್ತಿನ PGS ಸೆಕ್ರೆಟರಿಯೇಟ್‌ರಿಂದ ಪರಿಶೀಲನೆಗಾಗಿ, LG ಯು ಕೆಳಗಿನ ದಾಖಲೆಗಳನ್ನು ನಿರ್ವಹಿಸಬೇಕಾಗುತ್ತದೆ:

i. ಕಳೆದ ಒಂದು ವರ್ಷದದಿಂದ ಜಮೀನಿನಲ್ಲಿ ಬೆಳೆದ ಬೆಳೆಗಳ ವಿವರದೊಂದಿಗೆ ಪ್ರತಿ ಸದಸ್ಯರ ಅರ್ಜಿ ನಮೂನೆ

ii. ಪ್ರತಿ ಸದಸ್ಯರ PGS- India ದ ಪ್ರತಿಜ್ಞೆಯ ಪ್ರತಿ

iii. ಪ್ರಾದೇಶಿಕ ಪರಿಷತ್ತಿನೊಂದಿಗಿನ ಒಪ್ಪಂದದ ಪ್ರತಿ

iv. ಪ್ರತೀ ರೈತರ ಕಳೆದ ನಾಲ್ಕು ಋತುಗಳ (24 ತಿಂಗಳುಗಳು) ಪೀರ್ ಮೌಲ್ಯಮಾಪನಗಳ ಪ್ರತಿಗಳನ್ನೊಳಗೊಂಡು ಪ್ರಾದೇಶಿಕ ಪರಿಷತ್ತು ಭೌತಿಕ ತಪಾಸಣೆಯನ್ನು ಕೈಗೊಂಡ ದಿನಾಂಕದವರೆಗಿನ ಮೌಲ್ಯಮಾಪನಗಳ ಪ್ರತಿಗಳು

v. ಗುಂಪು ಸಭೆಗಳನ್ನು ಕೈಗೊಂಡಾಗ ನಿರ್ವಹಿಸಲಾದ ಹಾಜರಾತಿ ಮತ್ತು ಸಭೆಯ ನಡಾವಳಿಗಳ ದಾಖಲೆ ಪುಸ್ತಕ ತರಬೇತಿಗಳನ್ನು ಕೈಗೊಂಡಾಗ ನಿರ್ವಹಿಸಲಾದ ಹಾಜರಾತಿ ದಾಖಲೆ ಪುಸ್ತಕ

vii. ಪೀರ್ ಅಪ್ರೈಸಲ್ ಸಾರಾಂಶದ ಪ್ರತಿ (ಪ್ರಾದೇಶಿಕ ಪರಿಷತ್ತಿಗೆ ಸಲ್ಲಿಸಿದಂತೆ - ಋತುವಾರು)

**ಹಂತ 3**

a) ಪೀರ್ ಅಪ್ರೈಸಲ್ ವೇಳಾಪಟ್ಟಿಯನ್ನು ಚಾಕ್ ಔಟ್ ಮಾಡಿ ಮತ್ತು ಪೀರ್ ಅಪ್ರೈಸಲ್ ಗುಂಪುಗಳನ್ನು ರೂಪಿಸಬೇಕು. ಪ್ರತಿ ಗುಂಪು ಕನಿಷ್ಠ 3 ಪೀರ್ ಮೌಲ್ಯಮಾಪಕರನ್ನು ಹೊಂದಿರಬೇಕು. ರೈತರ ಸಂಖ್ಯೆಗೆ ಅನುಗುಣವಾಗಿ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಸದಸ್ಯರನ್ನು ಒಳಗೊಂಡ ಯಾವುದೇ ಸಂಖ್ಯೆಯ ಮೌಲ್ಯಮಾಪನ ತಂಡಗಳು ಇರಬಹುದು. ಮೌಲ್ಯಮಾಪನ ತಂಡದಲ್ಲಿ ಕನಿಷ್ಠ ಒಬ್ಬ ಸದಸ್ಯರು ಸಾಕ್ಷರರಾಗಿರಬೇಕು ಮತ್ತು ಮೌಲ್ಯಮಾಪನ ಫಾರ್ಮ್‌ಗಳನ್ನು ಭರ್ತಿ ಮಾಡುವುದನ್ನು ಚೆನ್ನಾಗಿ ತಿಳಿದಿರಬೇಕು.

b) ಎರಡು ಸದಸ್ಯರ ಗುಂಪಿನ ಮಾದರಿ (form) ಗಳ ನಡುವೆ ಪರಸ್ಪರ ವಿಮರ್ಶೆಯನ್ನು ಅನುಮತಿಸಲಾಗುವುದಿಲ್ಲ (ಅಂದರೆ A ಯು B ಅನ್ನು ವಿಮರ್ಶೆ ಮಾಡುವುದು ಮತ್ತು B ಯು A ಅನ್ನು ವಿಮರ್ಶೆ ಮಾಡುವುದು).

c) ಇತರ ಗುಂಪಿನ ಪೀರ್ ವಿಮರ್ಶಕರು ಅಥವಾ ಗ್ರಾಹಕರು/ವ್ಯಾಪಾರಿಗಳ ಪ್ರತಿನಿಧಿಗಳು ಅಥವಾ ಸ್ಥಳೀಯ ರಾಜ್ಯ ಕೃಷಿ ಇಲಾಖೆ ಅಧಿಕಾರಿಯನ್ನು ಪೀರ್ ಗುಂಪಿನ ಆಹ್ವಾನಿತ ಸದಸ್ಯರಾಗಿ ಆಹ್ವಾನಿಸಬೇಕು (ಆದರೆ ಅವರ ಭಾಗವಹಿಸುವಿಕೆ ಖಡ್ಡಾಯವಲ್ಲ). ಇದರಿಂದ ಗುಂಪಿನ ನಂಬಿಕೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಬಹುದು ಮತ್ತು ಪಾರದರ್ಶಕತೆಯನ್ನು [illegible]

d) ಪ್ರತಿ ಋತುವಿನಲ್ಲಿ ಒಮ್ಮೆಯಾದರೂ ಎಲ್ಲಾ ಮಾದರಿ (form) ಗಳ ಪೀರ್ ವಿಮರ್ಶೆಯನ್ನು ಪೂರ್ಣಗೊಳಿಸಬೇಕು. ಎಲ್ಲಾ ಫಾರ್ಮ್‌ಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

e) ಸಭೆಗಳಲ್ಲಿ ಪರಿಶೀಲನಾ ವರದಿಗಳನ್ನು ಚರ್ಚಿಸಬೇಕು ಮತ್ತು ಪ್ರತಿ ಜಮೀನಿನ ಸಾವಯವ ಸ್ಥಿತಿಯನ್ನು ಒಂದೊಂದಾಗಿ ನಿರ್ಧರಿಸಬೇಕು.

f) ಎಲ್ಲಾ ಅವಶ್ಯಕತೆಗಳನ್ನು ಪೂರೈಸಿದ ರೈತರನ್ನು ಪ್ರತ್ಯೇಕಿಸಿ, ಪ್ರಮಾಣಪತ್ರವನ್ನು ನೀಡಲು ಪರಿಗಣಿಸಬೇಕು.

g) PGS-India ದ ಮಾನದಂಡಗಳನ್ನು ಅನುಸರಿಸದ ರೈತರ ಬಗ್ಗೆ ಚರ್ಚಿಸಿ, ನ್ಯೂನ್ಯತೆಗಳ ಸ್ವರೂಪ ಮತ್ತು ಗಾಂಭೀರ್ಯತೆಯನ್ನು ಅವಲಂಬಿಸಿ ನಿರ್ಬಂಧಗಳನ್ನು ನೀಡಬೇಕು.

h) ದೃಢೀಕರಣದ ನಿರಾಕರಣೆ ಅಥವಾ ಗುಂಪಿನಿಂದ ಸದಸ್ಯರನ್ನು ಹೊರಗಿಡುವುದು ಇಡೀ ಗುಂಪಿನಿಂದ ಅನುಮೋದಿಸಲ್ಪಡಬೇಕು ಮತ್ತು ಡೀಫಾಲ್ಟ್ ಸದಸ್ಯರಿಗೆ ತಿಳಿಸಬೇಕು.

**ಹಂತ 4**

a) ಅಪ್ರೈಸಲ್ ಕಡತಗಳು/ದಾಖಲೆಗಳನ್ನು ಸಂಪೂರ್ಣತೆಗಾಗಿ ಪರಿಶೀಲಿಸಬೇಕು ಮತ್ತು ಸ್ಥಳೀಯ ಗುಂಪಿನ ಸಾರಾಂಶದ ವರ್ಕ್‌ಶೀಟ್ ಅನ್ನು ತಯಾರಿಸಬೇಕು.

b) ಗುಂಪು ಅಥವಾ ಪ್ರಮಾಣೀಕರಣ ಸಮಿತಿಯು ಪ್ರಮಾಣೀಕರಣವನ್ನು ನಿರ್ಧರಿಸುತ್ತದೆ ಮತ್ತು ಪ್ರತಿ ಗುಂಪಿನ ಸದಸ್ಯರ ಪ್ರಮಾಣೀಕರಣ ಸ್ಥಿತಿಯನ್ನು ಘೋಷಿಸುತ್ತದೆ.

c) PGS-India ವೆಬ್‌ಸೈಟ್‌ನಲ್ಲಿ ಎಲ್ಲಾ ವಿವರಗಳನ್ನು ಆನ್‌ಲೈನ್‌ನಲ್ಲಿ ನಮೂದಿಸಿ ಸಹಿ ಮಾಡಿದ ಮೌಲ್ಯಮಾಪನ ಸಾರಾಂಶದ ವರ್ಕ್‌ಶೀಟ್‌ನ ಪ್ರತಿಯನ್ನು ಪ್ರಾದೇಶಿಕ ಪರಿಷತ್ತಿಗೆ ಕಳುಹಿಸಬೇಕು. ಪರ್ಯಾಯವಾಗಿ PGS-India ವೆಬ್‌ಸೈಟ್‌ಗೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಸಹಿ ಮಾಡಿದ ಸಾರಾಂಶದ ಪ್ರತಿಯೊಂದಿಗೆ ಎಲ್ಲಾ ವಿವರಗಳನ್ನು ಮುದ್ರಿತ ಪ್ರತಿ (hard copy) ಯಲ್ಲಿ ಪ್ರಾದೇಶಿಕ ಪರಿಷತಿಗೆ ಕಳುಹಿಸಬೇಕು.

d) ಪ್ರಾದೇಶಿಕ ಪರಿಷತ್ತಿನಿಂದ ಅನುಮೋದನೆ ಪಡೆದ ಮೇಲೆ, ಗುಂಪಿನ ನಾಯಕರು ಆನ್‌ಲೈನ್‌ನಲ್ಲಿ ಸ್ಕೋಪ್ ಪ್ರಮಾಣಪತ್ರವನ್ನು ರಚಿಸಬಹುದು ಮತ್ತು ಅವರ ಸಹಿಯ ನಂತರ ಗುಂಪಿನ ಸದಸ್ಯರಿಗೆ ವಿತರಿಸಬಹುದು.

| |
|---|
| ಯಾವುದೇ ಪ್ರಮುಖ ಅಥವಾ ಗಂಭೀರವಾದ ನ್ಯೂನ್ಯತೆಯಿಲ್ಲದೆ ಪರಿವರ್ತನೆ ಅವಧಿಯನ್ನು ಪೂರ್ಣಗೊಳಿಸಿದ ರೈತರನ್ನು ಮಾತ್ರ "PGS-Organic" ಎಂದು ಘೋಷಿಸಲಾಗುತ್ತದೆ. ಒಂದು ಅಥವಾ ಹೆಚ್ಚಿನ ಪ್ರಮುಖ ನ್ಯೂನ್ಯತೆಯನ್ನು ಹೊಂದಿರುವ ಅಥವಾ ಪರಿವರ್ತನೆಯ ಅವಧಿಯಲ್ಲಿರುವ ರೈತರನ್ನು "PGS-Green" ಎಂದು ಘೋಷಿಸಲಾಗುತ್ತದೆ. ಯಾವುದೇ ಸದಸ್ಯರು ವಾರ್ಷಿಕ ಬೆಳೆಗಳ ಸಂದರ್ಭದಲ್ಲಿ 3 ವರ್ಷಗಳಿಗಿಂತ ಹೆಚ್ಚು ಮತ್ತು ಪ್ಲಾಂಟೇಶನ್/ಶಾಶ್ವತ ಬೆಳೆಗಳ ಸಂದರ್ಭದಲ್ಲಿ 4 ವರ್ಷಗಳಿಗಿಂತ ಹೆಚ್ಚು ಕಾಲ PGS-Green ಸ್ಥಿತಿಯನ್ನು ಪಡೆಯುವಂತಿಲ್ಲ. 3 ಅಥವಾ 4 ವರ್ಷಗಳ ಅವಧಿಯ ನಂತರ ಸದಸ್ಯರಿಗೆ PGS-ಸಾವಯವ ಎಂದು ಅರ್ಹತೆ ಪಡೆಯಲು ಸಾಧ್ಯವಾಗದ |

ಪ್ರಮುಖ ನ್ಯೂನ್ಯತೆಗಳ ಸಂದರ್ಭದಲ್ಲಿ, ನಿಷೇಧಿತ ವಸ್ತುಗಳ ಬಳಕೆಯನ್ನು ಹೊರತುಪಡಿಸಿ, “PGS- Organic” ಸ್ಥಿತಿಯನ್ನು ಒಂದು ಅಥವಾ ಎರಡು ಋತುಗಳಿಗೆ “PGS-Green” ಗೆ ಡೌನ್‌ಗ್ರೇಡ್ ಮಾಡಬಹುದು. ಮುಂದುವರಿದ ಡೀಫಾಲ್ಟ್ ಸದಸ್ಯರನ್ನು ಗುಂಪಿನಿಂದ ಹೊರಗಿಡಬಹುದು. ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಹಾರ್ಮೋನ್‌ಗಳಂತಹ ನಿಷೇಧಿತ ವಸ್ತುಗಳ ಬಳಕೆಯ ಎಲ್ಲಾ ಪ್ರಕರಣಗಳನ್ನು ಗಂಭೀರ ನ್ಯೂನ್ಯತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ಸದಸ್ಯರ ಪ್ರಮಾಣೀಕರಣದ ಸ್ಥಿತಿಯನ್ನು ಶೂನ್ಯ ಗಂಟೆಗೆ ಡೌನ್‌ಗ್ರೇಡ್ ಮಾಡಲಾಗುತ್ತದೆ ಮತ್ತು ಅಂತಹವರನ್ನು ಹೊರಗಿಡಬೇಕು ಅಥವಾ ಹೊಸ ಸದಸ್ಯರಾಗಿ ನೋಂದಾಯಿಸಿಕೊಳ್ಳಬೇಕು ಮತ್ತು ಪೂರ್ಣ ಪರಿವರ್ತನೆ ಅವಧಿಗೆ ಒಳಪಡಿಸಬೇಕು.

ಪ್ರಾದೇಶಿಕ ಪರಿಷತ್ತಿನ ಮೂಲಕ ಗುಂಪಿನ ನೋಂದಣಿ ಅನುಮೋದನೆಯ ನಂತರ ಬಿತ್ತಿದ ಬೆಳೆಗಳು ಮಾತ್ರ “PGS-Green” ಗೆ ಅರ್ಹತೆ ಪಡೆಯುತ್ತವೆ.

ಪ್ರಾದೇಶಿಕ ಪರಿಷತ್ತಿನಿಂದ ನೋಂದಣಿ ಅನುಮೋದನೆಯ ದಿನಾಂಕದ ಮೊದಲು ಹಿಂದಿನ ಬೆಳೆಗಳ ಋತುವಿನ ದಾಖಲೆಗಳನ್ನು ಪರಿಗಣಿಸಿ ಪ್ರಮುಖ ನ್ಯೂನ್ಯತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ಎಲ್ಲಾ ಸಂದರ್ಭಗಳಲ್ಲಿ ಗುಂಪಿನ ಪ್ರಮಾಣೀಕರಣ ಸ್ಥಿತಿಯನ್ನು ನೋಂದಣಿಗೆ ಡೌನ್‌ಗ್ರೇಡ್ ಮಾಡಲಾಗುತ್ತದೆ.

e) ಪೀರ್ ಮೌಲ್ಯಮಾಪನದ ಸಮಯದಲ್ಲಿ ಅನುಮೋದಿಸಿದಂತೆ ಅಂದಾಜು ಇಳುವರಿಯೊಂದಿಗೆ ಸ್ಕೋಪ್ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ.
f) ಬೆಳೆಗಳ ಕೊಯ್ಲಿನ ನಂತರ, ಗುಂಪು ನಿಜವಾದ ಇಳುವರಿಯನ್ನು ಅಪ್‌ಲೋಡ್ ಮಾಡಬೇಕಾಗುತ್ತದೆ. ವಹಿವಾಟು ಪ್ರಮಾಣಪತ್ರಗಳನ್ನು (TC) ಪಡೆಯಲು ನಿಜವಾದ ಇಳುವರಿಯನ್ನು ಅಪ್‌ಲೋಡ್ ಮಾಡುವುದು ಅವಶ್ಯಕವಾಗಿರುತ್ತದೆ.
g) ಪ್ರಾದೇಶಿಕ ಪರಿಷತ್ತಿನಿಂದ ಇಳುವರಿಯನ್ನು ಅನುಮೋದಿಸಿದ ನಂತರ, ಗುಂಪು ತನ್ನ ಉತ್ಪನ್ನಗಳನ್ನು PGS ಪ್ರಮಾಣೀಕೃತ ಉತ್ಪನ್ನವಾಗಿ ಮಾರಾಟ ಮಾಡಬಹುದು ಮತ್ತು ಆನ್‌ಲೈನ್‌ನಲ್ಲಿ ವಹಿವಾಟು ಪ್ರಮಾಣಪತ್ರವನ್ನು ಜನರೇಟ್ ಮಾಡಬಹುದು. ಪ್ರತಿಯೊಬ್ಬ ರೈತ ಸದಸ್ಯರಿಗೆ ಪ್ರತ್ಯೇಕವಾಗಿ ವಹಿವಾಟು ಪ್ರಮಾಣಪತ್ರ (transaction certiifcate) ಗಳನ್ನು ನೀಡಬಹುದು.
h) PGS ಪ್ರಮಾಣೀಕೃತ ಉತ್ಪನ್ನಗಳನ್ನು ನಿಗದಿತ ನಿಯಮಗಳು ಮತ್ತು ಷರತ್ತುಗಳ ಪ್ರಕಾರ PGS - India ಲೋಗೋದೊಂದಿಗೆ ಮಾರಾಟ ಮಾಡಬಹುದು.

**ಹಂತ 5**

a) ಒಂದು ವೇಳೆ ಪ್ರಾದೇಶಿಕ ಪರಿಷತ್ತು ಕಾರಣಗಳೊಂದಿಗೆ ನಿರ್ಧಾರವನ್ನು ಹಿಂತಿರುಗಿಸಿದರೆ, LG ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಮತ್ತು 15 ದಿನಗಳಲ್ಲಿ ಪರಿಷ್ಕೃತ ನಿರ್ಧಾರವನ್ನು ಮರುಸಲ್ಲಿಸಬೇಕಾಗುತ್ತದೆ.
b) ಪ್ರಾದೇಶಿಕ ಪರಿಷತ್ತಿನಿಂದ ಪ್ರಮಾಣಪತ್ರ ನಿರಾಕರಣೆಯ ಸಂದರ್ಭದಲ್ಲಿ, ತೃಪ್ತರಾಗದಿದ್ದಲ್ಲಿ LG ಯು ನಿರ್ಧಾರ ಪರಿಶೀಲನೆಗಾಗಿ PGS ಸೆಕ್ರೆಟರಿಯೇಟ್‌ನ ಸೂಚನೆಯೊಂದಿಗೆ ಆಯಾ ವಲಯ ಪರಿಷತ್ತಿಗೆ ಮನವಿ ಮಾಡಬಹುದು.

## 5.4 ಜಮೀನಿನ ಹೊರಗಿನ (off -farm) ಸಂಸ್ಕರಣಾ ಘಟಕಗಳ ಪ್ರಮಾಣೀಕರಣ ಪ್ರಕ್ರಿಯೆ

a) ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಸ್ಕರಣೆ, ನಿರ್ವಹಣೆ, ಸಂಗ್ರಹಣೆ/ಗೋದಾಮು, ಪ್ಯಾಕೇಜಿಂಗ್ ಮತ್ತು ವ್ಯಾಪಾರ ಸೇರಿದಂತೆ ಎಲ್ಲಾ ಆಫ್-ಫಾರ್ಮ್ ಸಂಸ್ಕರಣಾ ಘಟಕಗಳು ಆಫ್-ಫಾರ್ಮ್ ಸಂಸ್ಕರಣೆ ಮತ್ತು ನಿರ್ವಹಣೆಗಾಗಿ ನಿಗದಿತ ಸ್ವರೂಪದಲ್ಲಿ ಪ್ರಾದೇಶಿಕ ಪರಿಷತ್ತಿಗೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಬಳಸಬೇಕಾದ ಕಚ್ಚಾ ವಸ್ತುಗಳ ಸಂಪೂರ್ಣ ವಿವರಗಳು, ಮೂಲಗಳು, ಪ್ರತಿ ಕಚ್ಚಾ ವಸ್ತುವಿನ ಪ್ರಮಾಣೀಕರಣ ಸ್ಥಿತಿ, ಪ್ರಕ್ರಿಯೆ ಹರಿವಿನ ವಿವರದ ಪ್ರತಿ, ಪಾಕ ವಿಧಾನಗಳು, ಪರಿಕರ (input) ಮತ್ತು ಉತ್ಪನ್ನ (output) ಗಳ ಅನುಪಾತ, ಯಂತ್ರಗಳ ವಿವರಗಳು, ಅವುಗಳ ನಿರ್ವಹಣೆಯ ಕಾರ್ಯವಿಧಾನಗಳು, ಕಲುಷಿತ ನಿಯಂತ್ರಣ ಕ್ರಮಗಳು ಮತ್ತು ದಾಖಲಾತಿ ಮಾದರಿಗಳನ್ನು ಲೆಕ್ಕಪರಿಶೋಧನಾ ಪ್ರಕ್ರಿಯೆ (audit trial) ಗೆ ಒಳಪಡಿಸಲು ಅರ್ಜಿಯನ್ನು ಸಿದ್ಧಪಡಿಸಬೇಕು.

b) ಪ್ರಾದೇಶಿಕ ಪರಿಷತ್ತು ಅರ್ಜಿಯನ್ನು ಪರಿಶೀಲಿಸಿ ನಿರ್ವಹಣೆಗೆ ಸೂಕ್ತವೆಂದು ಕಂಡುಬಂದಾಗ ನೋಂದಣಿಗೆ ಒಪ್ಪಿಕೊಳ್ಳುತ್ತದೆ.

c) ಪ್ರಾದೇಶಿಕ ಪರಿಷತ್ತು ಮತ್ತು ನಿರ್ವಾಹಕರು, ಉತ್ಪಾದನಾ ಪ್ರಕ್ರಿಯೆಯ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಮತ್ತು PGS- India ದ ಮಾನದಂಡಗಳಿಗೆ ಬದ್ಧವಾಗಿರಲು ಒಪ್ಪಂದವನ್ನು ಮಾಡಿಕೊಳ್ಳಬೇಕು.

d) ಶುಲ್ಕ, ಪ್ರಾದೇಶಿಕ ಪರಿಷತ್ತಿನ ತಪಾಸಣೆ ವೆಚ್ಚ ಮತ್ತು ಪಾವತಿ ವಿಧಾನಗಳನ್ನು ಪ್ರಾದೇಶಿಕ ಪರಿಷತ್ತು ಮತ್ತು ನಿರ್ವಾಹಕರು ಒಪ್ಪಿಕೊಳ್ಳಬೇಕು.

e) ಪಾವತಿಯನ್ನು ಪಡೆದ ನಂತರ ಪ್ರಾದೇಶಿಕ ಪರಿಷತ್ತು ನೋಂದಣಿಯನ್ನು ಅನುಮೋದಿಸಿ ನೋಂದಣಿಯನ್ನು ಒಂದು ವರ್ಷಕ್ಕೆ ನೀಡಲಾಗುತ್ತದೆ ಮತ್ತು ವಾರ್ಷಿಕವಾಗಿ ನವೀಕರಿಸಬೇಕಾಗುತದೆ.

f) ಪ್ರತೀ ನೋಂದಾಯಿತ ಸಂಸ್ಕರಣೆ/ನಿರ್ವಹಣೆ ಘಟಕಗಳನ್ನು, ಪ್ರಕ್ರಿಯೆಯು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಪ್ರಾದೇಶಿಕ ಪರಿಷತ್ತಿನಿಂದ ಕನಿಷ್ಠ ವರ್ಷಕ್ಕೊಮ್ಮೆ ಭೌತಿಕವಾಗಿ ಪರೀಕ್ಷಿಸಬೇಕು.

g) ಸಂಸ್ಕರಣೆ/ನಿರ್ವಹಣೆ ಘಟಕಗಳ ಪ್ರಕ್ರಿಯೆಯು ತೃಪ್ತಿಕರವಾಗಿದ್ದಲ್ಲಿ, ಅವರು ಅಪ್‌ಲೋಡ್ ಮಾಡಿದ ವಾರ್ಷಿಕ ಕಾರ್ಯತಂತ್ರದ ನಮೂನೆಯ ಆಧಾರದ ಮೇಲೆ, ಪ್ರಾದೇಶಿಕ ಪರಿಷತ್ತಿನಿಂದ ಅನ್ವಯಿಸಲಾದ ಉತ್ಪಾದನಾ ಅಂದಾಜುಗಳೊಂದಿಗೆ ಅನುಮೋದಿಸಿದ ಪ್ರಕ್ರಿಯೆಗಳಿಗೆ ಪ್ರಾದೇಶಿಕ ಪರಿಷತ್ತು ಅನುಮೋದನೆ ನೀಡುತ್ತದೆ.

h) ಅಧಿಕೃತ ಪ್ರಾದೇಶಿಕ ಪರಿಷತ್ತಿನಿಂದ ಅನುಮೋದಿಸಲಾದ ಸಂಸ್ಕರಣಾ ಘಟಕವು PGS- ಗುಂಪುಗಳಿಗೆ ಸೇರಿದ PGS ಪ್ರಮಾಣೀಕೃತ ವಸ್ತುಗಳ ಸಂಸ್ಕರಣೆಯನ್ನು ಕೈಗೊಳ್ಳಬಹುದು.

i) ಅನುಮೋದಿತ ಸಂಸ್ಕರಣಾ ಘಟಕವು PGS ವಹಿವಾಟು ಪ್ರಮಾಣಪತ್ರದೊಂದಿಗೆ ಎಲ್ಲಾ ಕಚ್ಚಾ ವಸ್ತುಗಳನ್ನು ಸ್ವೀಕರಿಸುತ್ತದೆ. PGS ಪ್ರಮಾಣೀಕೃತ ಕಚ್ಚಾ ಸಾಮಗ್ರಿಗಳು ಲಭ್ಯವಿಲ್ಲದಿದ್ದಲ್ಲಿ, ವಹಿವಾಟು ಪ್ರಮಾಣಪತ್ರದೊಂದಿಗೆ NPOP ಪ್ರಮಾಣೀಕೃತ ಕಚ್ಚಾ ವಸ್ತುಗಳನ್ನು ಸಹ ಬಳಸಬಹುದು. ಆದರೆ ಅಂತಿಮವಾಗಿ ಯಾವುದೇ ಸಂದರ್ಭದಲ್ಲಿ, ಸಂಸ್ಕರಿಸಿದ ಉತ್ಪನ್ನವು PGS ಪ್ರಮಾಣೀಕೃತವಾಗಿರುತ್ತದೆ.

j) ಸಾವಯವ ಉತ್ಪನ್ನವು ಸಾವಯವವಲ್ಲದ ವಸ್ತು ಅಥವಾ ನಿಷೇಧಿತ ವಸ್ತುಗಳೊಂದಿಗೆ ಸಂಪರ್ಕಕ್ಕೆ ಬರದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

k) ಸಂಪೂರ್ಣ ಸಂಸ್ಕರಣೆಯು PGS- India ದ ಆಹಾರ ಸಂಸ್ಕರಣಾ ಮಾನದಂಡಗಳಿಗೆ ಬದ್ಧವಾಗಿರಬೇಕು.

l) NPOP ಅಡಿಯಲ್ಲಿ ಸಾವಯವ ಉತ್ಪಾದನೆಗಾಗಿ ರಾಷ್ಟ್ರೀಯ ಮಾನದಂಡಗಳಲ್ಲಿ (NSOP) ಒದಗಿಸಲಾದ ಅನುಮೋದಿತ ಪಟ್ಟಿಯ ಪ್ರಕಾರ ಎಲ್ಲಾ ಸೇರ್ಪಡೆಗಳು (addditives), ಸಂಸ್ಕರಣಾ ಸಾಧನಗಳು (processing aids) ಮತ್ತು ಸಂರಕ್ಷಕ (preservatives) ಗಳನ್ನು ಬಳಸಬೇಕು.

m) ಪ್ರಕ್ರಿಯೆಯ ಹರಿವಿನ ದಾಖಲಾತಿಯನ್ನು ನಿರ್ವಹಿಸಲಾಗುತ್ತದೆ ಮತ್ತು ಎಲ್ಲಾ ಸಮಯದಲ್ಲೂ ಪ್ರಾದೇಶಿಕ ಪರಿಷತ್ತು ಅನುಮೋದಿಸಿದಂತೆ ಪರಿಕರ (input) ಮತ್ತು ಉತ್ಪನ್ನ (output) ಗಳ ಅನುಪಾತದ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಬೇಕು.

n) PGS-India ವೆಬ್‌ಸೈಟ್‌ನಲ್ಲಿ ಸಂಪೂರ್ಣ ಪ್ರಕ್ರಿಯೆ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕು.

o) ಸಂಸ್ಕರಣೆ ಪೂರ್ಣಗೊಂಡ ಉತ್ಪನ್ನಗಳನ್ನು PGS- India ವೆಬ್‌ಸೈಟ್‌ನಲ್ಲಿ ಲಾಟ್ ಸಂಖ್ಯೆ/ ಬ್ಯಾಚ್ ಸಂಖ್ಯೆ ಮತ್ತು ಪ್ಯಾಕೇಜಿಂಗ್ ವಿವರಗಳೊಂದಿಗೆ ಅಪ್‌ಲೋಡ್ ಮಾಡಲಾಗುತ್ತದೆ. ಈ ಮಾಹಿತಿ ಇಲ್ಲದಿದ್ದಲ್ಲಿ ಯಾವುದೇ ವಹಿವಾಟು ಪ್ರಮಾಣಪತ್ರ (transaction certificate)ಗಳನ್ನು ನೀಡಲಾಗುವುದಿಲ್ಲ.

p) ಅಂತಿಮವಾಗಿ, ಸಂಸ್ಕರಣೆಗೊಳಿಸಿ ಪ್ಯಾಕ್ ಮಾಡಿದ ವಸ್ತುಗಳನ್ನು ವಹಿವಾಟು ಪ್ರಮಾಣಪತ್ರ (transaction certificate) ದೊಂದಿಗೆ ಮಾರಾಟ ಮಾಡಬೇಕು.

q) PGS- India ಕಾರ್ಯಕ್ರಮದ ಅಡಿಯಲ್ಲಿ ನೋಂದಾಯಿಸದ ವಿತರಕರು ಮತ್ತು ಚಿಲ್ಲರೆ ವ್ಯಾಪಾರಿಗಳು, ಆಹಾರ ಸುರಕ್ಷತಾ ಅಧಿಕಾರಿಗಳಿಂದ (ಅಗತ್ಯವಿದ್ದಲ್ಲಿ) ನಡೆಯಲ್ಪಡುವ ಪರಿಶೀಲನೆಗಾಗಿ ತಮ್ಮ ಖರೀದಿ ದಾಖಲೆಗಳೊಂದಿಗೆ ವಹಿವಾಟು ಪ್ರಮಾಣಪತ್ರದ ಪ್ರತಿ (transaction certificate) ಯನ್ನು ಇಟ್ಟುಕೊಳ್ಳಬೇಕು.

r) ವಹಿವಾಟಿನ ಪ್ರಮಾಣಪತ್ರ (transaction certificate) ವನ್ನು PGS- India ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಸೃಷ್ಟಿ (generate) ಮಾಡಲಾಗುತ್ತದೆ.